ದಿನಾಂಕ 14-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಎಂ.ಎಂ. ಪ್ರತಿವಾದಿ ಪರ ವಕೀಲರಿಂದ**

ನಮ್ಮ ತಂದೆಯ ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳಲ್ಲಿ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ 30 ವರ್ಷಗಳ ಹಿಂದೆ ಮುಟೇಷನ್ ಆಗಿ ಅವರವರ ಹೆಸರಿಗೆ ಪಹಣಿ ಪತ್ರಿಕೆಗಳು ಆಗಿದ್ದವು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನಗೆ ಸ.ನಂ.100 ರಲ್ಲಿ 3 ಎಕರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇನ್ನು ಪಾಲು ಮಾಡಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಬಸಪ್ಪರವರಿಗೆ ಸ.ನಂ.100 ರಲ್ಲಿ 4 ಎಕರೆ 20 ಗುಂಟೆ ಜಮೀನು ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಾಲು ಮಾಡಿಲ್ಲ ಎಲ್ಲರೂ ಒಟ್ಟಾಗಿದ್ದೇವೆ ಎಂದು ನುಡಿಯುತ್ತಾರೆ. ಅದೇ ರೀತಿ ಶಿವಶರಣಪ್ಪರವರಿಗೆ ಸ.ನಂ.100 ರಲ್ಲಿ 4 ಎಕರೆ 20 ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

ಸದರಿ ವಿಭಾಗದಲ್ಲಿ ನನಗೆ ನೀಡಲಾದ ಜಮೀನು ಫಲವತ್ತಾದ ಜಮೀನು ಆದಕಾರಣ ನನಗೆ 3 ಎಕರೆ ಮಾತ್ರ ನೀಡಿದ್ದರು ಎಂದರೆ ಸರಿಯಲ್ಲ ಸದರಿ ವಿಭಾಗದಲ್ಲಿ ಗ್ರಾಮದಲ್ಲಿರುವ ಮನೆ ಮತ್ತು ಖುಲ್ಲಾ ಜಾಗ ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ